
# ನರಿಯ ಜಾಣ್ಮೆ



■ **ನಾಗೇಂದ್ರ ಚಕ್ರಗಿರಿ**
ಕಲೆ: ಸಂತೋಷ್ ಸಸಿಹಿತ್ಲು

ಕಾಡಿನಲ್ಲಿ ಸಿಂಹವೊಂದು ಜಿಂಕೆಯನ್ನು ಬೇಟೆಯಾಡಿ ತನ್ನ ಹೊಟ್ಟೆ ತುಂಬುವಷ್ಟು ತಿಂದು ಉಳಿದುದನ್ನು ಹಾಗೇ ಬಿಟ್ಟು ಹೊರಟಿತು. ಅದಕ್ಕಾಗೇ ಕಾಯುತ್ತಿದ್ದ ನರಿ, ಸಿಂಹ ತಿಂದು ಬಿಟ್ಟಿದ್ದನ್ನು ತಾನು ತಿಂದು ತನ್ನ ಹೊಟ್ಟೆ ತುಂಬಿಸಿಕೊಂಡು ಅಲ್ಲಿಂದ ಕಾಲ್ತೆಗೆಯಿತು.

ಹೀಗೇ ಹತ್ತು ದಿನಗಳು ಕಳೆಯಿತು. ಹತ್ತನೇ ದಿನ ಸಿಂಹಕ್ಕೆ ಏನೂ ಆಹಾರ ಸಿಗದೆ ಕಾಡಿನಲ್ಲಿ ಬೇಟೆಗಾಗಿ ಅಲೆದಾಡುತ್ತಿತ್ತು. ಹಸಿವು ಜಾಸ್ತಿಯಾಗಿ ಏನು ಸಿಕ್ಕರೂ ತಿನ್ನುವ ಸ್ಥಿತಿಯಲ್ಲಿತ್ತು. ನರಿಯೂ ಆಹಾರ ಸಿಗದೆ ಸಿಂಹವನ್ನೇ ಹಿಂಬಾಲಿಸಿಕೊಂಡು ಬರುತ್ತಿತ್ತು. ಸಾಮಾನ್ಯವಾಗಿ ಸಿಂಹ ನರಿಯನ್ನು ತಿನ್ನುತ್ತಿರಲಿಲ್ಲ. ಆದರೆ ಹಸಿವು ತಡೆಯಲಾರದೆ ಚಕ್ಕನೆ ನರಿಯ ಮೇಲೆರಗಿ ಅದನ್ನು ಹಿಡಿದುಕೊಂಡು 'ಇಂದು ನೀನೇ ನನಗೆ ಆಹಾರ. ಇದುವರೆಗೆ ನೀನು ನಾನು ಬೇಟೆಯಾಡಿದ ಪ್ರಾಣಿಗಳನ್ನು ತಿಂದು ಬದುಕುತ್ತಿದ್ದೆ. ಇದು ನಾನು ನಿನಗೆ ಮಾಡುತ್ತಿದ್ದ ಉಪಕಾರ. ಈಗ ನನಗೆ ಪ್ರತ್ಯುಪಕಾರ ಮಾಡುವ ಅವಕಾಶ ನಿನಗೆ ಸಿಕ್ಕಿದೆ' ಎಂದಿತು.

ಹೆದರಿದ ನರಿ, ತನ್ನ ಜೀವ ಉಳಿದರೆ ಸಾಕೆಂದು 'ಮಹಾರಾಜ, ನಾನು ಹೇಗೆ ನಿಮಗೆ ಪ್ರತ್ಯುಪಕಾರ ಮಾಡಲಿ? ನಿಮ್ಮ ಸೇವೆಗೆ ನಾನು ಸದಾ ಸಿದ್ಧ' ಎಂದಿತು.

ಸಿಂಹ 'ನನಗೆ ಪ್ರತ್ಯುಪಕಾರ ಮಾಡಲು ನೀನು ಕಷ್ಟಪಡಬೇಕಾಗಿಲ್ಲ. ಇವತ್ತು ನೀನು ನನಗೆ ಆಹಾರವಾದರೆ ಸಾಕು' ಎಂದಿತು.

ಇಂದಿಗೆ ತನ್ನ ಕತೆ ಮುಗಿಯಿತು. ಸಿಂಹದ ಅಪಾರ ಶಕ್ತಿಯ ಮುಂದೆ ನನ್ನ ಆಟ ನಡೆಯುವುದಿಲ್ಲ. ಆದರೂ ಜೀವ ಉಳಿಸಿಕೊಳ್ಳಲು ತನ್ನ ಬುದ್ಧಿಶಕ್ತಿ ಉಪಯೋಗಿಸಿ ಪ್ರಯತ್ನಿಸಲೇಬೇಕು ಎಂದು ಯೋಚಿಸಿ 'ನಾನು ಒಪ್ಪಿದರೂ, ಒಪ್ಪದಿದ್ದರೂ ನನ್ನನ್ನು ತಿನ್ನುವಿರಿ. ಆದರೆ ಸಾಯುವ ಮುಂಚೆ, ಇಲ್ಲಿಯವರೆಗೂ ನಿಮ್ಮಿಂದ ಉಪಕೃತನಾಗಿರುವ ನಾನು ನಿಮಗೆ ನನ್ನಿಂದ ದ್ರೋಹವಾಗದಂತೆ ಒಂದು ವಿಷಯ ಹೇಳಲೇ ಬೇಕು' ಎಂದಿತು.

ಸಿಂಹ ಕುತೂಹಲದಿಂದ 'ನನಗೆ ದ್ರೋಹವಾಗುವ ವಿಷಯವೇ? ಬೇಗ ಹೇಳು, ಹಸಿವು ತಡೆಯಲಾಗುತ್ತಿಲ್ಲ' ಎಂದಿತು.

ನರಿಗೆ ಉಸಿರು ಬಂದಂತಾಗಿ ಸಿಂಹದೊಡನೆ ಹೇಳಿತು 'ಮಹಾರಾಜರೇ, ನೀವು ಕೆಲವು ದಿನಗಳ ಹಿಂದೆ ಜಿಂಕೆಯೊಂದನ್ನು ಬೇಟೆಯಾಡಿ ತಿಂದಿರಷ್ಟೇ. ಅದರ ಉಳಿದ ಮಾಂಸ ನಾನು ತಿಂದೆ. ನಿಮ್ಮ ಅದೃಷ್ಟ, ನೀವು ಅದರ ನಾಲಿಗೆ ಹಾಗೂ ಮೆದುಳನ್ನು ತಿನ್ನದೇ ಹಾಗೇ ಬಿಟ್ಟಿದ್ದೀರಿ. ನನ್ನ ದುರಾದೃಷ್ಟ ನಾನು ಅವನ್ನು ತಿಂದು ಬಿಟ್ಟೆ'.

ಸಿಂಹ ಆಶ್ಚರ್ಯದಿಂದ 'ಜಿಂಕೆಯ ಮೆದುಳು ಹಾಗೂ ನಾಲಿಗೆ ತಿನ್ನದೇ ಬಿಟ್ಟಿದ್ದು ನನ್ನ ಅದೃಷ್ಟವೇ? ಅದು ಹೇಗೆ?' ಎಂದಿತು.

ಆಗ ನರಿ 'ಮಹಾರಾಜರೆ, ಆ ಜಿಂಕೆಯ ನಾಲಿಗೆ ತಿಂದವರು ಹದಿನೈದು ದಿನಗಳಲ್ಲಿ ಸಾಯುತ್ತಾರೆ' ಎಂದಿತು.

'ಅಲ್ಲಯ್ಯಾ ನರಿ, ಆ ಜಿಂಕೆಯ ನಾಲಿಗೆ ತಿಂದರೆ ಸಾಯುತ್ತಾರೆ ಅಂತ ನಿನಗೆ ಹೇಗೆ ಗೊತ್ತಾಯ್ತು? ಗೊತ್ತಿದ್ದೂ ಅದನ್ನು ಹೇಗೆ ತಿಂದೆ? ಅದು ನಿಜ ಎಂದುಕೊಂಡರೂ ಅದನ್ನು ತಿಂದವನು ನೀನು, ಸಾಯುವವನು ನೀನು. ನನಗೂ ಅದಕ್ಕೂ ಏನು ಸಂಬಂಧ?' ಎಂದು ಸಿಂಹ ಪ್ರಶ್ನೆಗಳ ಮಳೆಗರೆಯಿತು.

ಆಗ ನರಿ 'ಆ ಜಿಂಕೆಯ ನಾಲಿಗೆ ತಿನ್ನುವಾಗ ನನಗೆ ವಿಷಯ ತಿಳಿದಿರಲಿಲ್ಲ. ಆದರೆ ನಾನು ಜಿಂಕೆಯ ನಾಲಿಗೆ ಜೊತೆ ಅದರ ಮೆದುಳನ್ನೂ ತಿಂದೆ. ಆಗ ನನಗೆ ಆ ಜಿಂಕೆಯೇ ಮಾತಾಡಿದಂತಾಗಿ ಈ ವಿಷಯವನ್ನು ಹೇಳಿದಂತಾಯ್ತು' ಎಂದು ಹೇಳಿತು.

ಸಿಂಹ ಅಸಹನೆಯಿಂದ 'ಸರಿ, ಸರಿ ಇನ್ನು ಮಾತು ಸಾಕು. ಜಿಂಕೆಯ ನಾಲಿಗೆ ತಿಂದ ನೀನು ಸಾಯುತ್ತಿರುವುದು ನಿಜ. ಇನ್ನು ನಾನು ಕಾಯಲಾರೆ' ಎನ್ನುತ್ತಾ ನರಿಯ ಕುತ್ತಿಗೆಗೆ ಬಾಯಿ ಹಾಕಲು ಮುಂದಾಯಿತು. ತಕ್ಷಣವೇ ನರಿ 'ಮಹಾರಾಜ. ವಿಷಯ ಪೂರ್ತಿ ಕೇಳಿ. ಆ ಜಿಂಕೆಯ ನಾಲಿಗೆ ಜೀರ್ಣವಾಗದೆ ನನ್ನ ಹೊಟ್ಟೆಯಲ್ಲೇ ಇದೆ. ನನ್ನನ್ನು ನೀವು ತಿಂದಾಗ ಅದು ನಿಮ್ಮ ಹೊಟ್ಟೆ ಸೇರಿ ನೀವೂ ಸಾಯುವಿರಿ' ಎಂದಿತು.

ಆಗ ಸಿಂಹಕ್ಕೆ ಭಯವಾಯ್ತು. ಆದರೂ ತನ್ನ ಅನುಮಾನ ಬಗೆಹರಿಸಿಕೊಳ್ಳಲು ನರಿಯನ್ನು ಮತ್ತೆ ಪ್ರಶ್ನಿಸಿತು 'ಜಿಂಕೆಯ ನಾಲಿಗೆಗೆ ಆ ಶಕ್ತಿ ಹೇಗೆ ಬಂತು. ಇದರಿಂದ ಜಿಂಕೆಗೇನು ಉಪಯೋಗ?' ನರಿಗೆ ಈಗ ತನ್ನ ಜೀವ ಉಳಿಯುವುದು ಖಚಿತವೆನಿಸಿ ತನ್ನ ಕಪೋಲ ಕಲ್ಪಿತ ಕತೆಯನ್ನು ಮುಂದುವರೆಸಿತು. 'ಆ ಜಿಂಕೆಯನ್ನು ಮಹರ್ಷಿಗಳೊಬ್ಬರು ಸಾಕಿದ್ದರಂತೆ. ಆ ಮಹರ್ಷಿ ಜಿಂಕೆಗೆ 'ಯಾವ ಪ್ರಾಣಿ ನಿನ್ನನ್ನು ಕೊಂದು ನಿನ್ನ ನಾಲಿಗೆಯನ್ನು ತಿನ್ನುತ್ತದೋ, ಅದು ನಾಲಿಗೆಯನ್ನು ಜೀರ್ಣಿಸಿಕೊಳ್ಳದೆ ಹದಿನೈದು ದಿನಗಳಲ್ಲಿ ಸಾಯುತ್ತದೆ. ಆಗ ನೀನು ಆ ಪ್ರಾಣಿಯ ಹೊಟ್ಟೆಯಿಂದ ಮತ್ತೆ ಜೀವಂತವಾಗಿ ಹೊರಬರುವೆ. ನಿನ್ನ ಮೆದುಳನ್ನು ತಿಂದದ್ದೇ ಆದರೆ ಈ ವಿಷಯವೆಲ್ಲಾ ಆ ಪ್ರಾಣಿಗೆ ಗೊತ್ತಾಗಿ ಮುಂಬರುವ ಸಾವಿನ ಭಯದಿಂದ ಚಡಪಡಿಸುತ್ತದೆ' ಎಂದು ವರ ಕೊಟ್ಟಿದ್ದಾರೆ. ಅದರಂತೆ ನಾನೀಗ ಚಿತ್ರ ಹಿಂಸೆ ಅನುಭವಿಸುತ್ತಿದ್ದೇನೆ. ನೀವು ನನ್ನನ್ನು ತಿಂದರೂ, ತಿನ್ನದೇ ಇದ್ದರೂ ನಾನು ಸಾಯುವುದು ಖಂಡಿತ. ನನ್ನನ್ನು ನೀವು ತಿಂದರೆ ನೀವೂ ಅನ್ಯಾಯವಾಗಿ ಸಾಯುತ್ತೀರಿ' ಎಂದು ತನ್ನ ಭಾಷಣ ಮುಗಿಸಿತು.

ಹಸಿವು ತೀರಿಸಿಕೊಳ್ಳಲು ಈ ನರಿಯನ್ನು ತಿಂದು ತಾನೇಕೆ ಸಾಯಬೇಕು ಎಂದು ಯೋಚಿಸಿ ಸಿಂಹ ನರಿಯನ್ನು ಬಿಟ್ಟು ಹೊರಟು ಹೋಯಿತು. ಜಾಣ್ಮೆಯಿಂದ ಜೀವ ಉಳಿಸಿಕೊಂಡ ನರಿ ಖುಷಿಯಿಂದ ತನ್ನ ದಾರಿ ಹಿಡಿಯಿತು. ■